# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:04.02.2023 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.40 (ವೀರಮದಕರಿ) ರಲ್ಲಿ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದವರು:-**

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ನಾಗಭೂಷಣ್ ಜಿ. | ಸ.ಕಾ.ನಿ.ಅ., ಎಡಿಟಿಪಿ, ವಾರ್ಡ್ ನೋಡಲ್ ಅಧಿಕಾರಿಗಳು |
| 2 | ಭರತ್ ಕುಮಾರ್ ಎನ್. | ಕಿರಿಯ ಆರೋಗ್ಯ ಪರಿವೀಕ್ಷಕರು |
| 3 | ಡಿ.ಟಿ. ಶ್ರೀನಿವಾಸ್ | ಸೂಪರ್‌ವೈಸರ್ |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

**1) ಬಿಡಬ್ಲ್ಯೂಎಸ್‌ಎಸ್‌ಬಿ:-**

ಜಲವಾಯು ವಸತಿ ಸಮುಚ್ಚಯದಲ್ಲಿ ನೀರಿನ ಕೊರತೆಯಿದೆ ಎಂದು ಸಭೆಯಲ್ಲಿ ಹಾಜರಿದ್ದ ಅಲ್ಲಿಯ ನಿವಾಸಿಗಳು ನೀರಿನ ಸಮಸ್ಯೆಯ ಬಗ್ಗೆ ನೋಡಲ್ ಅಧಿಕಾರಿಗೆ ತಿಳಿಸಿದರು.

**2) ಕಾಮಗಾರಿ ಇಲಾಖೆ:**

ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಟಾಟಾ ಅಕ್ವಿಲ್ಲಾ ಹೈಟ್ಸ್ ನಿವಾಸಿ ಅಪಾರ್ಟ್‌ಮೆಂಟ್ ಹತ್ತಿರ ಫುಟ್‌ಪಾತ್ ಮೇಲೆ ಡೆಬ್ರಿಸ್ ಇದ್ದು, ಅದನ್ನು ರಿಮೂವ್ ಮಾಡಿಸಲು ನೋಡಲ್ ಅಧಿಕಾರಿಗೆ ತಿಳಿಸಿದರು. ಅಪಾರ್ಟ್‌ಮೆಂಟ್ ಹತ್ತಿರ ರಸ್ತೆ ಉಬ್ಬು ನಿರ್ಮಿಸಿಕೊಡಲು ಕೋರಿದರು.

ರಾಘವೇಂದ್ರ ಸ್ವಾಮಿ ದೇವಸ್ಥಾನದ ರಸ್ತೆಯು ಮುಖ್ಯರಸ್ತೆಗೆ ಸೇರಿರುತ್ತದೆ. ಅಲ್ಲಿನ ಕಲ್ವರ್ಟ್‌ನ್ನು ಸ್ವಲ್ಪ ಎತ್ತರಗೊಳಿಸಲು ಹಾಜರಿದ್ದ ಜಾಲಹಳ್ಳಿ ಗ್ರಾಮಸ್ಥರು ತಿಳಿಸಿದರು.

**3) ಬೀದಿ ಬದಿ ವ್ಯಾಪಾರಿಗಳ ತೆರವುಗೊಳಿಸುವ ಬಗ್ಗೆ:-**

ಹೆಚ್ ಎಂ ಟಿ ವಾಚ್ ಫ್ಯಾಕ್ಟರಿ ರಸ್ತೆಯಲ್ಲಿ ಬೀದಿ ಬದಿ ವ್ಯಾಪಾರಿಗಳು ರಸ್ತೆ ಬದಿಯಲ್ಲಿ ತಮ್ಮ ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರವನ್ನು ಮಾಡುತ್ತಿರುವುದರಿಂದ ಓಡಾಟಕ್ಕೆ ಮತ್ತು ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಎಂದು ನೋಡಲ್ ಅಧಿಕಾರಿಗೆ ತಿಳಿಸಿದರು.

**4) ಬ್ಲ್ಯಾಕ್ ಸ್ಪಾಟ್ (ಘನತ್ಯಾಜ್ಯ) ಗಳ ನಿರ್ವಹಣೆ:-**

ಜಾಲಹಳ್ಳಿ ವಾರ್ಡ್‌ನಲ್ಲಿ ತ್ಯಾಜ್ಯ ನಿರ್ವಹಣೆಯ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ, ವಾರ್ಡ್‌ನಲ್ಲಿ ಪ್ರತಿದಿನ ಕಸ ವಿಲೇವಾರಿ ಕಾರ್ಯವು ಸಮರ್ಪಕವಾಗಿ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಕೊನೆಯದಾಗಿ, ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಮಸ್ಯೆ / ದೂರುಗಳನ್ನು ದಾಖಲಿಸಲು ವಾರ್ಡ್ ನಲ್ಲಿ ದೂರು ದಾಖಲಿಸುವ ಪುಸ್ತಕ ಲಭ್ಯವಿರುವಂತೆ ನೋಡಿಕೊಂಡು ಬರುವ ದೂರುಗಳನ್ನು ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಹಾಗೂ ಪ್ರತಿ ವಾರ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಮುಂದುವರೆಸುಂತೆ ಸೂಚಿಸುತ್ತಾ, ಸಕಾಲದಲ್ಲಿ ಸಾರ್ವಜನಿಕ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ಕೈಗೊಂಡು ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:40

(ನಾಗಭೂಷಣ್ ಜಿ.)
ಸ.ಕಾ.ನಿ.ಅ. ಎಡಿಟಿಪಿ ಹಾಗೂ
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:40